# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆ:** 5018/2023 ಫ್ರಾಸಾ-02
ಚಾಸಾ-02

ದಿನಾಂಕಃ 27-10-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ರಂಗನಾಥ |
| **ತಂದೆಯ / ಗಂಡನ ಹೆಸರು** | ದೊಡ್ಡರಂಗಪ್ಪ |
| **ವಯಸ್ಸು** | 55 |
| **ಉದ್ಯೋಗ** | ಗುತ್ತಿಗೆದಾರರು |
| **ವಾಸಸ್ಥಳ** | ಬಂದ್ರೆಹಳ್ಳಿ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ಚಾಸಾ-1 ನನ್ನ ಹೆಂಡತಿ, ಚಾಸಾ-3 ರಿಂದ 5 ನನ್ನ ಮಕ್ಕಳು, ಚಾಸಾ-6 ನನ್ನ ಮಾವನ ಮಗಳು, ಆರೊಪಿತರು ನಮ್ಮ ಊರಿನವರು , ಅವರ ಪರಿಚಯ ಇರುತ್ತದೆ. ಸುಮಾರು 3 ವರ್ಷಗಳ ಹಿಂದೆ ರಾತ್ರಿ 9-00 ಗಂಟೆಗೆ ನಾನು ಟಿ.ವಿ.ಎಸ್. ಸ್ಕೂಟಿಯಲ್ಲಿ ನಾನು ಒಬ್ಬನೇ ಮಧುಗಿರಿಯಿಂದ ಮನೆಗೆ ಬರುತ್ತಿದ್ದಾಗ ಸುಬ್ಬರಾಯಪ್ಪ ರವರ ಮನೆ ಬಳಿ ಬಂದಾಗ ಅಲ್ಲಿ ಜನಗಳು ಸೇರಿದ್ದರು, ನೂಕಾಟ ತಳ್ಳಾಟ ಆಗುತ್ತಿತ್ತು ಸದರಿ ನೂಕಾಟದಲ್ಲಿ ನನಗೆ ಏಟು ಬಿದ್ದಿದ್ದರುತ್ತದೆ , ಯಾರು ಹೊಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಲೆಗೆ , ಎಡಕಣ್ಣಿನ ಕೆಳಗೆ ಗಾಯವಾಗಿರುತ್ತದೆ. ರಾತ್ರಿ ಆಗಿದ್ದರಿಂದ ಯಾರು ಹೊಡೆದಿರುತ್ತಾರೆಂದು ನನಗೆ ಗೊತ್ತಿಲ್ಲ. ನ್ಯಾಯಾಲಯದಲ್ಲಿರುವ ಗಾಯಾಳು ಹೇಳಿಕೆ ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಗಾಯಾಳು ಹೇಳಿಕೆ ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಿಪಿ-3 ಕ್ಕೆ ನಾನು ಬೆಂಗಳೂರುಆಸ್ಪತ್ರೆಯಲ್ಲಿ ಸಹಿ ಮಾಡಿರುತ್ತೇನೆ. ನಿಪಿ-3 ರಲ್ಲಿ ಬರೆದ ವಿಚಾರ ನನಗೆ ಗೊತ್ತಿರುವುದಿಲ್ಲ. ಪೊಲೀಸರ ಮುಂದೆ

ಮತ್ತು ವೈದ್ಯರ ಸಮಕ್ಷಮ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುತ್ತಾರೆಂದು ನಾನು ಹೇಳಿಕೆ ನೀಡಿರುವುದಿಲ್ಲ. ಚಾಸಾ-7 ನನ್ನ ತಾಯಿ ಅವಳಿಗೂ ತಳ್ಳಾಟದಲ್ಲಿ ಸೊಂಟದ ಮೂಳೆ ಮುರಿದಿತ್ತು. ಚಾಸಾ-7 ರವರಿಗೆ ಯಾರು ತಳ್ಳಿರುತ್ತಾರೆ ಮತ್ತು ಹಲ್ಲೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 01.03.2023 ರಂದು ರಾತ್ರಿ 8-00 ಗಂಟೆಗೆ ನಾನು , ಚಾಸಾ-3 ರಿಂದ 7 ಮನೆ ಹತ್ತಿರ ಇರುವಾಗ ಚಾಸಾ-9 ರವರು ಮನೆ ಬಳಿ ಬಂದು ತೇರಿನ ಬೀದಿಯಲ್ಲಿರುವ ಛತ್ರದ ಕೇಳಿದ್ದು ನಾನು ಕೀ ಕೊಟ್ಟಿದ್ದು ಅವನೊಂದಿಗೆ ಶ್ರೀರಂಗನಾಥಸ್ವಾಮಿ ದೇವಸ್ಥಾನದವರೆಗೂ ಹೋಗಿ ವಾಪಸ್ಸು ಬರುವಾಗ ನ್ಯಾಯಾಲಯದ ಮುಂದೆ ಇರುವ 2 ಆರೋಪಿ ಕುಡಿದು ಆರೋಪಿ 3 ರವರೊಂದಿಗೆ ಗಲಾಟೆ ಮಾಡಿಕೊಳ್ಳುತಿದ್ದ. ಆಗ ನನ್ನನ್ನು ನೋಡಿದ ಕೂಡಲೇ ನನಗೆ ಮೂರು ರೋಡ್ ಮರಳಿನ ದುಡ್ಡು ಕೊಡಬೇಕು ನಾನು ಆಯಿತು ಬೆಳಿಗ್ಗೆ ಮಾತನಾಡೋಣ ಎಂದು ಹೇಳಿದರೂ ಕೂಡ ಆರೋಪಿ ಬಸವರಾಜು ನನ್ನ ಕೊರಳಿ ಪಟ್ಟಿ ಹಿಡಿದು ಎಳೆದಾಡಿದ ಅಷ್ಟರಲ್ಲಿ ಆರೋಪಿ-1 , 3 ಮತ್ತು 4 ರವರು ಬಂದು ಹಳೇ ದ್ವೇಷದಿಂದ ಏಕಾ ಏಕಿ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ದೇವಸ್ಥಾನದ ಬಳಿ ಬಿದ್ದಿದ್ದ ಇಟ್ಟಿಗೆ ಪೀಸು ಮತ್ತು ಕಲ್ಲುಗಳಿಂದ ನನ್ನ ಎಡ ಕೆನೆಗ್ಗೆ ಎಡ ಕಣ್ಣಿನ ಪಕ್ಕ ಹೊಡೆದರು ಅಷ್ಟರಲ್ಲಿ ನನ್ನ ಹೆಂಡತಿ ಮಕ್ಕಳು ಚಾಸಾ-3 ರಿಂದ 7 ಬಂದು ಜಗಳ ಬಿಡಿಸಿದರು, ನನ್ನನ್ನು ಮನೆ ಕಡೆಗೆ ಕರೆದುಕೊಂಡು ಹೋಗುವಾಗ ಆರೋಪಿತರೆಲ್ಲರೂ ಚಾಸಾ-7 ನನ್ನ ತಾಯಿಯನ್ನು ತಳ್ಳಿದ್ದು ಅವರು ಕೆಳಗೆ ಬಿದ್ದರು ಇದರಿಂದ ಅವರ ತಲೆಗೆದ ಸೊಂಟಕ್ಕೆ ಗಾಯವಾಗಿರುತ್ತದೆ ಎಂದರೆ ಸರಿಯಲ್ಲ.

ನಾನು ಚಿಕಿತ್ಸೆ ಪಡೆದುಕೊಂಡು ಪೊಲೀಸ್ ದೂರು ಕೊಡಲು ಎಂದು ರಾತ್ರಿ 8-40 ಗಂಟೆಗೆ ಭಾಗ್ಯಮ್ಮ ರವರ ಅಂಗಡಿಯ ಮುಂದಿನ ರಸ್ತೆಯಲ್ಲಿ ಆರೋಪಿ-1 ರಿಂದ 4 ರವರು ನನ್ನನ್ನು ಅಡ್ಡಗಟ್ಟಿ ನೀನು ಪೊಲೀಸ್ ಠಾಣೆಗೆ ನನ್ನ ಮೇಲೆ ದೂರು ಕೊಡಲು ಹೋಗುತ್ತೀಯಾ ಎಂದು ಮತ್ತೆ ತಡೆದು ಜಗಳ ತೆಗೆದು ನಿನನಗೆ ಒಂದು ಗತಿ ಕಾಣಿಸುತ್ತೇವೆ ನೀನು ಹೇಗೆ ಹೋಗುತ್ತೀಯಾ ಈ ದಿವಸ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ಎಂದು ಆರೋಪಿ ರಾಮು ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಕೊಲೆ ಮಾಡುವ ಉದ್ದೇಶ ದಿಂದ ನನ್ನ ತಲೆ ಹಿಂಭಾಗಕ್ಕೆ ಜೊರಾಗಿ ಹೊಡೆದನು , ಆರೋಪಿ ಬಸವರಾಜು ನನ್ನನ್ನು ಕೊಲೆ ಮಾಡುವ ಉದ್ಧೇಶದಿಂದ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ತಲೆಯ ಎಡಭಾಗಕ್ಕೆ ಹೊಡೆದನು , ಆರೋಪಿ ಶನಿವಾರಪ್ಪ ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ತನ್ನ ಕೈಯಲ್ಲಿದ್ದ ದೊಣ್ಣೆಯಿಂದ ಬಲಗೈಗೆ ಹೊಡೆದನು ಅಷ್ಟರಲ್ಲಿ ನನ್ನ ಹೆಂಡತಿ ಮಕ್ಕಳು ಮತ್ತು ನನ್ನ ಮಾವನ ಮಗಳು ಪಲ್ಲವಿ ಮತ್ತು ಮಹೇಂದ್ರ ರವರು ಬಂದು ಗಲಾಟೆ ಬಿಡಿಸಿದರು , ನಾಲ್ಕು ಜನ ದೊಣ್ಣೆಗಳನ್ನು ಅಲ್ಲೆ ಬಿಸಾಕಿ ನಿನ್ನನ್ನು ಕೊಲೆ ಮಾಡದೇ ಬಿಡುವುದಿಲ್ಲ ನಿಮ್ಮ ಮನೆಯವರಿಗೆಲ್ಲರಿಗೂ ಒಂದು ಗತಿ ಕಾಣಿಸುತ್ತೇನೆ ಎಂದು ಬೆದರಿಕೆ ಹಾಕಿ ಹೊರಟು ಹೋದರು ಎಂದರೆ ಸರಿಯಲ್ಲ. ನಂತರ ನನ್ನನ್ನು ತುಮಕೂರಿನ ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಬೆಂಗಳೂರಿನ ನಿಮಾನ್ಸ್ , ವಿಕ್ಟೋರಿಯಾ ಮತ್ತು ಬಾಪಿಸ್ಟ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ ಎಂದು ನಾನು ಪೊಲೀಸರ ಮುಂದೆ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ-4 ಎಂದು ಗುರುತಿಸಲಾಯಿತು. ನಾನು ನಿಪಿ-3 ಮತ್ತು 4 ರಂತೆ ಪೊಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರೂ ಕೂಡ ಆರೊಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜನರು ಸೇರಿದ್ದು ಅಲ್ಲಿ ಗಲಾಟೆ ಆಗುತ್ತಿದ್ದು ತಳ್ಳಾಟ ನೂಕಾಟದಲ್ಲಿ ನನಗೆ ಮತ್ತು ನನ್ನ ತಾಯಿ ಗಾಯವಾಗಿರುತ್ತದೆ ಯಾರು ನಮ್ಮ ಮೇಲೆ ಹಲ್ಲೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರೆಲ್ಲರೂ ನಮ್ಮ ಮೇಲೆ ಹಲ್ಲೆ ಮಾಡಿದ್ದರೂ ಕೂಡ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮು.ಮಾ-3 ರಿಂದ 5 ನನ್ನ ಬಟ್ಟೆಗಳು ಎನ್ನುವುದು ನಿಜ. ಮು.ಮಾ-6 ರಿಂದ 9 ದೊಣ್ಣೆಗಳಿಂದಲೇ ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಮು.ಮಾ-6 ರಿಂದ 9 ದೊಣ್ಣೆಗಳಿಂದಲೇ ನನ್ನ ಮೇಲೆ ಆರೋಪಿತರು ಹಲ್ಲೆ ಮಾಡಿದ್ದರೂ ಕೂಡ ನಾನು ಸುಳ್ಳು ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

**ಪಾಟೀಸವಾಲು ಶ್ರೀ. ಎಸ್.ಆರ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ತುಮಕೂರು-ಮಧುಗಿರಿ.**